ಅನಿಸುವುದುಂಟು! ಡಾಕ್ಟರ್ ಅಥವಾ ಕವಿಯಾಗಬೇಕು ಎಂಬ ಕನಸು ನನ್ನದು.

◆ ನಿಮಗೆ ಕವಿತೆನೇ ಯಾಕೆ ಬರಿಬೇಕು ಅನಿಸ್ತು? ಇದರ ಹಿಂದಿನ ಪ್ರೇರಣೆ ಏನು?

ಕವಿತೆಗಳನ್ನ ಬರೆಯುವುದು ನನಗೆ ಖುಷಿ ಕೊಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಹುಡುಗಿಯರಲ್ಲಿ ಮತ್ತು ಮಧ್ಯ ವಯಸ್ಕ ಮಹಿಳೆಯರಲ್ಲಿ ನನ್ನ ಬರವಣಿಗೆಯ ಮೂಲಕ ಸ್ಫೂರ್ತಿ ತುಂಬಬೇಕೆಂಬ ಆಸೆ ನನ್ನದು. ಯಾಕೆಂದರೆ ಬಹಳಷ್ಟು ಆಫ್ರಿಕನ್ನರು ಹುಡುಗಿಯರಿಂದ ಈ ಪ್ರಪಂಚಕ್ಕೆ ಯಾವ ಪ್ರಯೋಜನವೂ ಇಲ್ಲವೆಂದು ನಂಬುತ್ತಾರೆ. ನಾನು ಬರೆದುದನ್ನು ಓದುವುದರ ಮೂಲಕ ಕೇವಲ ಗಂಡಸರ ಮೇಲೆ ಅವಲಂಬಿತರಾಗದೆ, ಅಡುಗೆ ಕೋಣೆ ಹೊರತು ಪಡಿಸಿ ಸ್ವತಂತ್ರವಾಗಿ ಮಾಡಬಹುದಾದ ಇಂತಹದ್ದೇನನ್ನಾದರೂ ಮಾಡುವ ಮನಸ್ಸು ಹೆಣ್ಣುಮಕ್ಕಳದಾಗಬಹುದು ಎಂಬ ಆಶಯ ನನ್ನದು.

◆ ನಿಮ್ಮ ನೆಚ್ಚಿನ ಕವಿ-ಲೇಖಕರು ಯಾರು?

I know why the caged Bird sings ಎಂದು ಹಾಡಿದ ಮಾಯ ಏಂಜೆಲೊ ನನ್ನ ರೋಲ್ ಮಾಡೆಲ್. ಆದರೆ ಜನೆಲ್ಲಾ ಎರಿನ್ ಎಲಿಝಬೆತ್ ಪೀಟರ್ಸ್ ನನ್ನ ನೆಚ್ಚಿನ ಕವಯಿತ್ರಿ.ಆಕೆಯ ಪಾಲಿಗೆ ಕಾವ್ಯ ಒಂದು ಥೆರೆಪಿ.ಮಾನಸಿಕ ಅನಾರೋಗ್ಯ,ಮಾಯದ ಗಾಯಗಳು,ಲೈಂಗಿಕ ಕಿರುಕುಳ,ಗೀಳು ಹಾಗೂ ಈಡೇರದ ಕನಸುಗಳು ಏನೆಲ್ಲಾ ತಂದಿದಾಳೆ ತನ್ನ ಕಾವ್ಯದಲ್ಲಿ.

15.ನಿಮ್ಮ ಕೆಲವು ಬಿಡಿ ಕವಿತೆಗಳನ್ನು ಮಾತ್ರ ಗಮನಿಸಿರುವೆ.ಕವನ ಸಂಕಲನವೇನಾದರೂ ಪ್ರಕಟವಾಗಿದೆಯಾ?

ಇಲ್ಲ.ಇನ್ನೂ ಇಲ್ಲ. ಅಷ್ಟೊಂದು ಲಕ್ಷುರಿ ನನಗಿನ್ನೂ ಸಿಕ್ಕಿಲ್ಲ.

**ಅಬೆಡಿ ಮಿರಿಯಲ್ ಕವಿತೆಗಳು**

## ಅತ್ಯಾಚಾರ

ಇಲ್ಲಿ ಅಕ್ಕ ಅಮ್ಮ ತಂಗಿಯ
ನಡುವೆ ಅಂಥಾ ವ್ಯತ್ಯಾಸವಿಲ್ಲ

ಏಕೆಂದರೆ

ಇಲ್ಲಿ ಗರ್ಭ ಧರಿಸುವುದು
ಮನುಷ್ಯರಲ್ಲ
ಬಂದೂಕುಗಳು

## ಆಕಾಶದ ಬಣ್ಣ

ರೆಫ್ಯೂಜಿ ಕ್ಯಾಂಪಿನ
ಆಕಾಶ
ಹೇಗಿರುತ್ತೆ ಗೊತ್ತಾ?

ಇಲ್ಲ

ಬಹುಶಃ
ನಿಮಗೆ ಗೊತ್ತಿಲ್ಲ

ಆದರ ಬಣ್ಣವೂ!



ಕಲೆ: ಬಸವರಾಜ ಕಲೆಗಾರ